

International Journal of Kannada Research
www.kannadajournal.com

**ISSN: 2454–5813**
IJKR 2023; 9(4): 51-52
© 2023 IJKR
www.kannadajournal.com
Received: 20-07-2023
Accepted: 27-09-2023

**Dr. Soumyalatha P**
Associate Professor,
Department of Kannada,
Government First Grade College,
Hiriadka, Udupi, Karnataka,
India

# ಬದಲಾಗುತ್ತಿರುವ ಮಾನವೀಯ ಸಂಬಂಧಗಳು

**Dr. Soumyalatha P**

**ಪೀಠಿಕೆ**

ಸಂಘಜೀವಿಯಾದ ಮನುಷ್ಯ ಬದುಕಿಗಾಗಿ ಒಂದಲ್ಲ ಒಂದು ರೀತಿಯಲ್ಲಿ ಇನ್ನೊಬ್ಬರ ಮೇಲೆ ಅವಲಂಬಿತನಾಗುವುದು ಸ್ವಾಭಾವಿಕ. ಹಾಗಾಗಿ ಮನುಷ್ಯ ಮನುಷ್ಯರ ಮಧ್ಯೆ, ಮನುಷ್ಯ ಮತ್ತು ಸಮಾಜದ ಮಧ್ಯೆ ವಿಶಿಷ್ಟವಾದ ಸಂಬಂಧ ನಿರ್ಮಾಣಗೊಳ್ಳುತ್ತದೆ. 'ಸಂಬಂಧ' ಎಂದರೆ ಚೆನ್ನಾಗಿ ಕಟ್ಟಲ್ಪಟ್ಟದ್ದು. ಮನುಷ್ಯ ಮನುಷ್ಯನ ನಡುವೆ ಕಟ್ಟಲಾದ ಈ ಬೆಸುಗೆಯನ್ನು ಮಾನವೀಯ ಸಂಬಂಧ ಎನ್ನಬಹುದು. ಇದು ತಮ್ಮನ್ನು ತಾವು ಅರಿಯುವ ಹಾದಿಯಲ್ಲಿ ಸರಿಯಾಗಿ ಕ್ರಮಿಸುವ ಪ್ರಕಿಯೆ. ಈ ಬೆಸುಗೆಯನ್ನು ಗಟ್ಟಿಗೊಳಿಸುವುದು ಸುಲಭದ ಕೆಲಸವಲ್ಲ.

ಪರಸ್ಪರ ಅರಿತುಕೊಳ್ಳುವಗುಣಇದ್ದಾಗ ಮಾತ್ರಸಂಬಂಧ ಶಾಶ್ವತವಾಗಿ ಉಳಿಯುವುದಕ್ಕೆ ಸಾಧ್ಯ. ಇದರ ಜೊತೆಗೆ ಹೊಂದಾಣಿಕೆ, ತಾಳ್ಮೆ, ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಮನಸ್ಸು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮನುಷ್ಯ ಪ್ರಜ್ಞಾವಂತನಾದಂತೆ ಮಾನವೀಯ ಸಂಬಂಧ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಇದು ಇಂದು ನಮ್ಮ ಮುಂದಿರುವ ಬಹುದೊಡ್ಡ ಆತಂಕ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಬದುಕಿನ ಮೌಲ್ಯವನ್ನು ಅಧ:ಪತನಕ್ಕೆ ತಳ್ಳುತ್ತಿದೆ. ಇದಕ್ಕೆ ಇನ್ನೂ ಅನೇಕ ಕಾರಣಗಳನ್ನು ಗುರುತಿಸಬಹುದು. ಬದುಕಿನ ರೀತಿ, ಶಿಕ್ಷಣ ವ್ಯವಸ್ಥೆ, ಆಹಾರ ಪದ್ಧತಿ, ನಿರಾವಲಂಬನೆ ಮುಂತಾದುವನ್ನು ಇಲ್ಲಿ ಗುರುತಿಸಬಹುದು. ಇದರಿಂದಾಗಿ ಸಂಬಂಧಗಳು ಬಳಸಿ ಬಿಸಾಡುವ ವಸ್ತುಗಳಂತಾಗಿವೆ. ಸಂಬಂಧಗಳ ಬೆಸುಗೆಗೆ ದಾರಿಮಾಡಿಕೊಟ್ಟಿದ್ದ ಜಗಲಿಕಟ್ಟೆಯ ಜಾಗದಲ್ಲಿ ಇವತ್ತು ಜಂಗಮವಾಣಿ ರಾರಾಜಿಸುತ್ತಾ ಅದೇ ಸಂಬಂಧಗಳಲ್ಲಿ ಬಿರುಕನ್ನು ಮೂಡಿಸುತ್ತಿವೆ. ಆದರೆ ಚಲನಶೀಲ ಜಗತ್ತಿನ ಭಾಗವಾದ ನಾವು ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತಾ ಸರಿತಪ್ಪುಗಳನ್ನು ಗಮನಿಸಿಕೊಂಡು ಸಾಗಿದರೆ ಮಾನವೀಯ ಸಂಬಂಧಗಳು ಇನ್ನಷ್ಟು ಗಟ್ಟಿಗೊಳ್ಳುವುದಕ್ಕೆ ಅವಕಾಶವಿದೆ ಎಂಬ ಚರ್ಚೆಯನ್ನು ಮಾಡುವ ಪ್ರಯತ್ನ ಈ ಪ್ರಬಂಧದ ಉದ್ದೇಶವಾಗಿದೆ.

ಕನ್ನಡ ಸಾಹಿತ್ಯವನ್ನು ಗಮನಿಸಿದಾಗ, ಅಲ್ಲಿ ಮಾನವಂತಿಕೆಯ ಕೆಲವು ಮಾದರಿಗಳು ಕಾಣಿಸಿಕೊಳ್ಳುತ್ತವೆ. ಸಾಹಿತ್ಯ ಮಾನವಂತಿಕೆಯಿಂದ ಬಾಳುವುದನ್ನು ಕಲಿಸುತ್ತದೆ. ಕವಿರಾಜಮಾರ್ಗದ ಉದಾಹರಣೆಯೊಂದನ್ನು ಇಲ್ಲಿ ಗಮನಿಸಬಹುದು. " ಕಸವರಮೆಂಬುದು ನೆರೆಸೈರಿಸಲಾರ್ಪೊಡೆ ಪರಧರ್ಮಮಂ ಪರವಿಚಾರಮುಮಂ". ಪರರ ವಿಚಾರಗಳನ್ನು ಮತ್ತು ಪರಧರ್ಮವನ್ನು ಸಹಿಸಿಕೊಳ್ಳುವ ಮನುಷ್ಯನ ಗುಣವೇ ನಿಜವಾದ ಸಂಪತ್ತು. ಇಲ್ಲಿ ಮಾರ್ಗಕಾರ ಹೇಳಿರುವುದು ಮಾನವೀಯತೆಯನ್ನು. ಮನುಷ್ಯತ್ವ ಎನ್ನುವುದು ಈತ ಗುರುತಿಸಿದ ಬಹುದೊಡ್ಡ ಸಂಪತ್ತು. ಆದಿಕವಿ ಪಂಪ ತನ್ನ ಕೃತಿಯಲ್ಲಿ ಮಾನವೀಯತೆಯ ದರ್ಶನ ಮಾಡಿಸುವ ಅನೇಕ ಸಂದರ್ಭಗಳಿವೆ. ಪಂಪ ಹೇಳುವ 'ಮನುಷ್ಯಜಾತಿ ತಾನೊಂದೆವಲಂ' ಎನ್ನುವ ಒಂದು ಮಾತು ಸಾಕು ಜಾತಿಯನ್ನು ಮೀರಿ ಮನುಷ್ಯ ಬೆಳೆಯಬೇಕಾದ ನೀತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ. ಇದು ಮಾನವೀಯ ಸಂಬಂಧಗಳ ನಿರ್ಮಾಣಕ್ಕೆ ಅಡಿಪಾಯ. 'ಆದಿ ಪುರಾಣ'ದಲ್ಲಿ ಪಂಪ ಸಾರಿದ ಮಾನವೀಯ ಮೌಲ್ಯವನ್ನು ಗಮನಿಸುವುದಕ್ಕೆ ಅವಕಾಶವಿದೆ. ಇಲ್ಲಿ ಆತ ನಿರ್ಮಾಣ ಮಾಡಿದ ಪುಷ್ಪೋದ್ಯಾನ ಎಲ್ಲರಿಗೂ ಪರಿಚಿತ. ಭರತನ ರಾಣಿಯರು ಉದ್ಯಾನದಲ್ಲಿ ವಿಹರಿಸುತ್ತಾ ಹೂಗಳೊಂದಿಗೆ ಸಂವಾದ ಮಾಡುವ ಸನ್ನಿವೇಶ ಆಪ್ಯಾಮಾನವಾಗುವಂತದ್ದು. ಆದರೆ ಅಲ್ಲಿ ಚಿಗುರುಗಳನ್ನು ಕಿತ್ತು, ಹೂಗಳನ್ನು ಕೊಯ್ದು ಉಪವನ ಕ್ರೀಡೆಯಲ್ಲಿ ಮೈಮರೆಯುತ್ತಾರೆ. ಇದಕ್ಕಾಗಿ ಕವಿ ಮನಸ್ಸು ಮರುಗುತ್ತದೆ. ಹಾಗಾಗಿ 'ಮರೆಯಿರೆಮ್ಮ ಮದೋತ್ಕಟ ಚೇಷ್ಟಿತಂಗಳಂ' ಎಂಬುದಾಗಿ ಅವರು ಕ್ಷಮೆ ಯಾಚಿಸುವಂತೆ ಮಾಡುತ್ತಾನೆ.ಇದು ಪಂಪನ ಮಾನವೀಯತೆಯ ಕಾಣ್ಕೆ.

**Corresponding Author:**
**Dr. Soumyalatha P**
Associate Professor,
Department of Kannada,
Government First Grade College,
Hiriadka, Udupi, Karnataka,
India

ಹಣದ ಮದ, ಅಧಿಕಾರದ ಮದ ಮಾನವೀಯತೆಯನ್ನು ಮರೆಸುತ್ತದೆ. ನೆನಪಿಸುವ ಕೆಲಸವನ್ನು ಸಾಹಿತ್ಯ ನಿರಂತರ ಮಾಡಿದೆ. ದಾಸವಾಣಿ 'ರೊಕ್ಕ ಎರಡಕ್ಕು ದು:ಖ' ಎನ್ನುತ್ತಾ ಮನುಷ್ಯರನ್ನು ಎಚ್ಚರಿಸಿದೆ. ಸಂಪತ್ತಿನ ಮದದಿಂದ ಬೀಗುವ ಮಂದಿ ಎಲ್ಲಾ ಕಾಲಘಟ್ಟಗಳಲ್ಲಿಯೂ ಕಾಣಿಸಿಕೊಂಡಿದ್ದಾರೆ. ಇದನ್ನು ಗಮನಿಸಿದ ವಚನಕಾರರು "ಗರಹೊಡೆದವರ ನುಡಿಸಲುಬಹುದು, ಸಿರಿಗರ ಹೊಡೆದವರ ನುಡಿಸಲುಬಾರದು ನೋಡಯ್ಯಾ' ಎನ್ನುತ್ತಾರೆ. ಪರಂಪರೆಯಿಂದ ಮನುಷ್ಯತ್ವ ಮರೆತ ಸನ್ನಿವೇಶದಲ್ಲಿ ಸಾಹಿತ್ಯ ಎಚ್ಚರಿಸುವ ಪ್ರಯತ್ನ ಮಾಡಿದೆ. ಆಧುನಿಕ ಸಾಹಿತ್ಯ ಸಂದರ್ಭಕ್ಕೆ ಬಂದಾಗ, ಬರಹಗಾರರು ಈ ನಿಟ್ಟಿನಿಂದ ಪ್ರಯತ್ನಿಸಿದ ಬಗೆಯನ್ನು ಗಮನಿಸಬಹುದು. ಮಾನವೀಯತೆಯನ್ನು ಕಳೆದುಕೊಂಡು ಬದುಕುವ ಮಂದಿಯನ್ನು ನೋಡಿ ಕವಿಮನಸ್ಸು ಕಂಗಾಲಾಗಿದೆ. ಜಿ.ಎಸ್.ಎಸ್. ಅವರು ಹೇಳುವಂತೆ "ಎದೆ ಎದೆಗಳ ನಡುವೆ ಇದ್ದ ಸೇತುವೆಗಳು ಮುರಿದಿವೆ. ಭಯ ಸಂಶಯ ತಲ್ಲಣಗಳ ಕಂದರಗಳು ತೆರೆದಿವೆ".

(ಯಾವುದೀ ಪ್ರವಾಹವು) ನಂಬಿಕೆಯನ್ನು ಕಳೆದುಕೊಂಡ ಬದುಕು ಸಾರ್ಥಕ್ಯವನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ನವೋದಯ ಕಾವ್ಯಸಂದರ್ಭದಲ್ಲಿ ನಿಸರ್ಗ ಪ್ರೀತಿ ಮತ್ತು ಮಾನವತ್ವದ ಪರಿಕಲ್ಪನೆ ವಿಶಿಷ್ಟವಾಗಿತ್ತು. ಇವರಡರ ಬೆಸುಗೆಯನ್ನು ಗಟ್ಟಿಗೊಳಿಸುವ ಪ್ರಯತ್ನ ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡಿದೆ.

ಆಧುನೀಕತೆ ಕಾಲಿಟ್ಟ ಸಂದರ್ಭದಿಂದ ಮಾನವನ ಆಚಾರ ವಿಚಾರ, ರೀತಿನೀತಿಗಳಲ್ಲಿ ಬದಲಾವಣೆಯ ಗಾಳಿ ಬೀಸಿತು. ನಿಜವಾದ ಮಾನವತೆಯ ದರ್ಶನಕ್ಕೆ ಸಾಹಿತ್ಯ ಸಜ್ಜಾಯಿತು. ಸಿದ್ದಯ್ಯ ಪುರಾಣಿಕರ 'ಮೊದಲು ಮಾನವನಾಗು' ಈ ಹಿನ್ನೆಲೆಯಿಂದ ಅಧ್ಯಯನ ಯೋಗ್ಯ ಕವನ.

ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು ಏನಾದರೂ ಆಗು ನೀ ಬಯಸಿದಂತಾಗು ಏನಾದರೂ ಸರಿಯೆ ಮೊದಲು ಮಾನವನಾಗು ಮನುಷ್ಯ ಬದುಕಿನಲ್ಲಿ ಏರಿಳಿತಗಳು ಸಹಜ. ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕಾದರೆ ಮೊದಲು ಮಾನವನಾಗಬೇಕೆಂಬ ಸಂದೇಶವನ್ನು ಕವಿ ಈ ಮೂಲಕ ಸಾರಿದ್ದಾರೆ. ಡಿ.ವಿ.ಜಿ ಅವರ ಕಗ್ಗದತ್ತ ಕಣ್ಣು ಹಾಯಿಸಿದರೆ ಅವರು ಮಾನವರು ಎಲ್ಲರೊಳಗೆ ಒಂದಾಗಬೇಕಾದ ಅನಿವಾರ್ಯತೆಯನ್ನು ತಿಳಿಯಪಡಿಸಿದ್ದಾರೆ." ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲಸಕ್ಕರೆಯಾಗು ದೀನದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ". ಮನುಷ್ಯ ಏನಾಗಬೇಕೆಂಬುದನ್ನು ಈ ಸಾಲುಗಳು ಸ್ಪಷ್ಟಪಡಿಸಿವೆ. ಮಾನವಂತಿಕೆಯ ಬೇರು ಭೂಮಿಯ ಆಳಕ್ಕಿಳಿದು ಗಟ್ಟಿಗೊಳ್ಳಬೇಕಾದ ನೆಲೆ ಇಲ್ಲಿದೆ. ಮನುಜಮತ ವಿಶ್ವಪಥವಾಗಬೇಕಾದ ಆಲೋಚನೆ ಕುವೆಂಪು ಅವರ ವಿಶ್ವಮಾನವ ಪ್ರಜ್ಞೆಯಲ್ಲಿದೆ. ದ್ವೇಷ, ಅಸೂಯೆ, ಕ್ರೋಧ ಮುಂತಾದ ಕೆಟ್ಟಗುಣಗಳು ಸುಟ್ಟು, ಸಮಾನತೆಯ ಬದುಕು ಪ್ರಾಪ್ತಿಯಾಗಬೇಕೆಂಬುದು ಕವಿಗಳ ಅಪೇಕ್ಷೆಯಾಗಿತ್ತು.

ಮಾನವೀಯ ಸಂಬಂಧ ಬದಲಾಗುವುದಕ್ಕೆ ಅನೇಕ ಕಾರಣಗಳಿವೆ. ಬಹಳ ಮುಖ್ಯವಾದ ಕಾರಣ ನಾವು ಕಟ್ಟಿಕೊಂಡಿರುವ ಬದುಕು. ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿವೆ. ಯಾಂತ್ರಿಕ ಬದುಕಿಗೆ ಒಗ್ಗಿಕೊಂಡು ಯಂತ್ರಮಾನವರಾಗಿದ್ದೇವೆ. ಒತ್ತಡದ ಬದುಕಿನಿಂದಾಗಿಮನೆಮಂದಿಯಜೊತೆಬೆರೆಯುವುದನ್ನು ಮರೆಯುತ್ತಿದ್ದೇವೆ.ಹಾಗಾಗಿಮಕ್ಕಳೆಲ್ಲಾ ಮೈದಾನವನ್ನು ಬಿಟ್ಟು ಆಟದ ಚಾನೆಲ್‌ಗಳಿಗೆ ಶರಣಾಗುತ್ತಿದ್ದಾರೆ.

ಜಗಲಿಕಟ್ಟೆಯ ಜಾಗವನ್ನು ಜಂಗಮವಾಣಿ ಆಕ್ರಮಿಸಿದೆ. ಆರ್ಥಿಕ ಸ್ವಾವಲಂಬನೆಯಿದೆ. ತಂತ್ರಜ್ಞಾನ ಬಹಳಷ್ಟು ಮುಂದುವರಿದಿದೆ. ಮಾಹಿತಿಗಳೆಲ್ಲಾ ಅಂಗೈಯಲ್ಲಿಯೇ ಸಿಗುವ ಕಾರಣ ಯಾರ ಜೊತೆಗಿನ ಮುಖಾಮುಖಿಯ ಅಗತ್ಯವಿಲ್ಲ. ಮನೆಮಂದಿಯೆಲ್ಲಾ ಒಟ್ಟು ಸೇರಿ ಮಾಡುವ ಹಬ್ಬಹರಿದಿನಗಳು,ಊರಜನರುಸೇರಿಮಾಡುವ ಜಾತ್ರೆ, ಉತ್ಸವಗಳುಅಥವಾ ಸಮಾರಂಭಗಳು ಸಂಭ್ರಮವನ್ನು ಕಳೆದುಕೊಂಡಿವೆ. ಶಿಕ್ಷಣ ವ್ಯವಸ್ಥೆ, ಆಹಾರ ವ್ಯವಸ್ಥೆ ಎಲ್ಲವೂ ಬದಲಾಗಿವೆ. ದಾರಿಯುದ್ದಕ್ಕೂ ತುಂಟಾಟವಾಡುತ್ತಾ ಶಾಲೆಗೆ ತೆರಳುವ ಮಕ್ಕಳಿಗೆ ಇಂದು ಮನೆಯ ಮೆಟ್ಟಿಲು ಇಳಿದಾಗ ಶಾಲೆಯ ವಾಹನ ಸಿದ್ಧವಾಗಿರುತ್ತದೆ. ಅಂಕ ಪಡೆಯುವುದೇ ಪರಮ ಗುರಿಯಾಗಿರುವ ಕಾಲಮಾನದಲ್ಲಿ ಮಾನವೀಯ ಸಂಬಂಧ ಗಟ್ಟಿಗೊಳ್ಳುವುದಕ್ಕೆ ಅವಕಾಶಗಳು ತೀರಾ ಕಡಿಮೆಯಾಗಿವೆ. ದೂರಾಗುತ್ತಿರುವ ಮಾನವೀಯ ಸಂಬಂಧಗಳ ಮರುಸ್ಥಾಪನೆಯಾಬೇಕಿದೆ. ಬಹುದೊಡ್ಡ ಸವಾಲಾಗಿ ಪರಿಣಮಿಸಿದ ಪತಿ–ಪತ್ನಿಯ ಸಂಬಂಧ, ಹೆತ್ತವರ ಮತ್ತು ಮಕ್ಕಳ ಸಂಬಂಧ ಬಲಗೊಳ್ಳಬೇಕಾಗಿದೆ. ಕೋವಿಡ್ ಮಹಾಮಾರಿಯಿಂದಾಗಿ ಎಲ್ಲೋ ದೂರದಲ್ಲಿದ್ದ ಮನೆಮಂದಿ ಮತ್ತೆ ಒಂದೇ ಸೂರಿನಡಿ ಸೇರಿದ್ದಾರೆ. ಪರರ ಕಷ್ಟಕ್ಕೆ ಸ್ಪಂದಿಸುವ, ಗುರುಹಿರಿಯರನ್ನು ಗೌರವಿಸುವ, ತನ್ಮೂಲಕ ಸ್ವಚ್ಛಸಮಾಜವನ್ನು ನಿರ್ಮಿಸುವ ಆಲೋಚನೆಯನ್ನು ಹಂಚಿಕೊಳ್ಳುತ್ತಾ ಸಹಬಾಳ್ವೆಯನ್ನು ಬದಲಾವಣೆಗಳಿಗೆ ಸ್ಪಂದಿಸಿ ಸರಿತಪ್ಪುಗಳನ್ನು ಅರ್ಥೈಸಿಕೊಂಡು ಬಾಳಬೇಕಾಗಿದೆ.

**ಗ್ರಂಥಋಣ**


1. ಅನರ ತರಂಗಾಚಾರ್ (2002), ಪಂಪಭಾರತ ಗದ್ಯಾನುವಾದ, ಕನ್ನಡಸಾಹಿತ್ಯ ಪರಿಷತ್ತು, ಬೆಂಗಳೂರು. ಅಂಗಡಿ ಎಸ್.ಎಸ್. (2009), ಸರಳಕವಿ ರಾಜಮಾರ್ಗ, ಮಂಗಳಪ್ರಕಾಶನ; ಹೊಸಪೇಟೆ.
2. ನರಸಿಂಹಶಾಸ್ತ್ರಿ ಕೆ.ಎಲ್ (2011), ಆದಿಪುರಾಣ ಗದ್ಯಾನುವಾದ, ಕನ್ನಡಸಾಹಿತ್ಯ ಪರಿಷತ್ತು, ಬೆಂಗಳೂರು. ಶಿವರುದ್ರಪ್ಪ ಜಿ. ಎಸ್ (೧೯೮೭),ಸಮಗ್ರ ಕಾವ್ಯ,ಸ್ನೇಹ ಪ್ರಕಾಶನ, ಬೆಂಗಳೂರು